# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/111/2015-16 ದಿನಾಂಕ:20.10.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಶ್ರೀಮತಿ ಗುಬ್ಬಮ್ಮ ಬಸಾಪುರ ಗಂಡ ಲೇಟ್ ಚನ್ನಬಸಪ್ಪ<br>ಗ್ರಾಮ:-ಉಲವತ್ತಿ ತಾ:-ಹೆಚ್.ಬಿ.ಹಳ್ಳಿ | 1. ಶ್ರೀ ಹಂಚಿನಾಳ ಶಿವಕುಮಾರ<br>2. ಶ್ರೀ ಬಿ.ಮೇಘರಾಜ<br>3. ಶ್ರೀ ಐ.ಪ್ರಕಾಶ<br>4. ಶ್ರೀ ಐ.ನಿಂಗಪ್ಪ<br>5. ಶ್ರೀ ಐ.ಸುರೇಶ<br>6. ಶ್ರೀ ಐ.ಮಣ್ಣ ಬಸಪ್ಪ<br>7. ಶ್ರೀ ಐ.ನಾಗರಾಜ<br>8. ಶ್ರೀ ಇಟಗಿ ಶಿವಾನಂದಪ್ಪ ತಂದೆ ಇಟಗಿ ನೀಲಪ್ಪ<br>9. ಶ್ರೀ ನುಪ್ಪನಗೌಡ್ರ ಹೊನ್ನನಗೌಡ ತಂದೆ ದುರುಗಪ್ಪ<br>[ತಕರಾರುದಾರ 1 ರಿಂದ 8 ]<br>ಗ್ರಾಮ:-ಹಂಚಿನಾಳ ತಾ:-ಹೆಚ್.ಬಿ.ಹಳ್ಳಿ<br>[ತಕರಾರುದಾರ 9]<br>ಗ್ರಾಮ:-ನೆಲ್ಲುಕುದರಿ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ನೆಲ್ಲುಕುದರಿ | 47 | 10-95 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ನೆಲ್ಲುಕುದರಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಉಲವತ್ತಿ ಗ್ರಾಮದ ನಿವಾಸಿಯಾದ ಶ್ರೀಮತಿ ಗುಬ್ಬಮ್ಮ ಬಸಾಪುರ ಗಂಡ ಲೇಟ್ ಚನ್ನಬಸಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕು ಬದಲಾವಣೆಗೆ ದಿನಾಂಕ:06.02.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:09.02.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:01.03.2016 ರಂದು ಶ್ರೀ ಹಂಚಿನಾಳ ಶಿವಕುಮಾರ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.32/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:19.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪುಟ-2ಕ್ಕೆ

ಪ್ರಕರಣವನ್ನು ದಿನಾಂಕ:19.05.2016 ರಿಂದ 22.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಮತ್ತು ತಕರಾರುದಾರ(1) ಹಾಜರಾಗಿರುತ್ತಾರೆ. ಪ್ರಕರಣದಲ್ಲಿ ಅರ್ಜಿದಾರರು ಹೇಳುವಂತೆ; ಸದರಿ ಜಮೀನಿಗೆ ಪೌತಿ ವಾರಸು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ ಸದರಿ ಜಮೀನು ತಕರಾರುದಾರರ(1) ಅಜ್ಜಿಯವ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆ ನೀಡಿರುತ್ತಾರೆ.

ದಿನಾಂಕ:09.06.2016 ಅರ್ಜಿದಾರರು ಮತ್ತು ತಕರಾರುದಾರ(1-7) ಮತ್ತು ಯಲ್ಲಮ್ಮ ಇವರು ಹಾಜರಾಗಿರುತ್ತಾರೆ. ತಕರಾರುದಾರರು(1) ಹೇಳುವಂತೆ; ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಮೌಖಿಕವಾಗಿ ಹೇಳಿಕೆ ನೀಡಿರುತ್ತಾರೆ. ಸದರಿ ದಿನಾಂಕದಂದು ಮಧ್ಯಾಂತರ ತಕರಾರುದಾರರು (2-7) ಇವರು ಲಿಖಿತವಾಗಿ ತಮ್ಮ ತಕರಾರು ಅರ್ಜಿಯನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ. ಹ.ಬೊ.ಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ, ಹಂಚಿನಾಳು ಗ್ರಾಮದ ನೆಲ್ಲುಕುದರಿ ಸ.ನಂ.47 ಪಹಣಿಗೆ ಕೊಟ್ಟಿರುತ್ತಾರೆ. ಅರ್ಜಿ ಕೊಟ್ಟಿರುವರು ತಪ್ಪು ಮಾಹಿತಿ ಕೊಟ್ಟಿರುತ್ತಾರೆ. ಶಿವಪ್ಪ ಹೆಂಡತಿ ಯಲ್ಲಮ್ಮ ಎಂಬುವ ಮತ್ತು ವಿರೂಪಾಕ್ಷಪ್ಪ ಮಗ ಶಿವಕುಮಾರ, ನಂದಿಬಂಡಿ ಇವರು ತಪ್ಪು ಮಾಹಿತಿ ಕೊಟ್ಟಿರುತ್ತಾರೆ. ತಮಗೆ ಮಾನ್ಯ ಉಪತಶೀಲ್ದಾರರು ತಮಗೆ ತಿಳಿಯ ಪಡಿಸುವುದೇನೆಂದರೆ ಈ ಜಮೀನು 10-95 ಎಕರೆ ಆರು ಜನಕ್ಕೆ ಒಂದೇ ಕುಟುಂಬ ಆಗಿರುವುದರಿಂದ ಸೇರಿರುತ್ತದೆ. ಇಟಿಗಿ ಹನುಮಪ್ಪ ಮತ್ತು ಭೀಮಪ್ಪ ಇವರ ಇಬ್ಬರು ಅಣ್ಣ ತಮ್ಮ ಆಗಿರುವುದರಿಂದ ಹನುಮಂತಪ್ಪ ಇವರಿಗೆ ಸಂತಾನ ಇಲ್ಲದರಿಂದ ಭೀಮಪ್ಪನವರಿಗೆ ಆರು ಜನ ಗಂಡು ಮಕ್ಕಳು ಇದ್ದು ಸ.ನಂ.47 10-95 ಎಕರೆ, 1) ಮದ್ದಾನಪ್ಪ 2)ನೀಲಪ್ಪ 3)ಸಿದ್ದಪ್ಪ 4)ಶಿವಪ್ಪ 5)ರಾಮದಾಸಪ್ಪ 6)ಬಸವರಾಜಪ್ಪ ಈ ಜಮೀನು ಎಲ್ಲರು ಸಾಗುವಳಿ ಇದ್ದು ಶಿವಪ್ಪ ಹೆಂಡತಿ ಯಲ್ಲಮ್ಮ ಹಂಚಿನಾಳ, 50ವರ್ಷ ವಾಸವಾಗಿರುವುದಿಲ್ಲ. ಆದ ಕಾರಣ ಸ.ನಂ.47 10-95 ಎಕರೆ, ಈ ಜಮೀನಿನ ಮೇಲೆ ಅಣ್ಣ ಮತ್ತು ತಮ್ಮಂದಿರು ಮೇಲೆ ವಿರೂಪಾಕ್ಷಪ್ಪ ಮಗ ಶಿವಕುಮಾರ ದೌರ್ಜನ್ಯ ಎಸಗಿರುತ್ತಾರೆ. ಈ ಜಮೀನು ಮಾನ್ಯ ನ್ಯಾಯಾಧೀಶರಲ್ಲಿ ಕೇಳುಕೊಳ್ಳುವುದೇನೆಂದರೆ ಯಲ್ಲಮ್ಮ ಗಂಡ ಶಿವಪ್ಪ ಇವರ ಮಗನಾದ ವಿರೂಪಾಕ್ಷಪ್ಪ ನಂದಿಬಂಡಿ ಶಿವಕುಮಾರ ತಮ್ಮ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಶಿವಕುಮಾರ ತಂದೆ ವಿರೂಪಾಕ್ಷಪ್ಪ ಇವರು ಕೊಟ್ಟಿರುವ ಅರ್ಜಿಯನ್ನು ತಡೆಹಿಡಿಯಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಎಂದು ಲಿಖಿತವಾಗಿ ಮಧ್ಯಾಂತರ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ:23.06.2016 ರಂದು ಅರ್ಜಿದಾರರು ಮತ್ತು ತಕರಾರುದಾರರು(1,2,3,4) ಮತ್ತು ಯಲ್ಲಮ್ಮ ಇವರು ಹಾಜರಾಗಿರುತ್ತಾರೆ. ಅರ್ಜಿದಾರರು ಹೇಳುವಂತೆ; ಸದರಿ ಪ್ರಕರಣದಲ್ಲಿ ಪೌತಿ ವಾರಸು ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆ ನೀಡಿರುತ್ತಾರೆ. ತಕರಾರುದಾರರು(1) ಹೇಳುವಂತೆ; ಮುಂದಿನ ದಿನದಲ್ಲಿ ನನ್ನ ಹೇಳಿಕೆಯನ್ನು ಹೇಳುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿ ದಿನಾಂಕ:28.07.2016 ರಂದು ಅರ್ಜಿದಾರರು ಮತ್ತು ತಕರಾರುದಾರರ(1,8,9) ಹಾಜರಾಗಿರುತ್ತಾರೆ. ತಕರಾರುದಾರ(1) ಹೇಳುವಂತೆ; ಸದರಿ ಜಮೀನಿನಲ್ಲಿ ನಾವು ಅನುಭವದಲ್ಲಿರುತ್ತೇವೆ ಮತ್ತು ಸದರಿ ಜಮೀನು ಮೂಲತ: ನಮ್ಮ ಅಜ್ಜಿಯ ಮಾವನವರದ್ದಾಗಿರುತ್ತದೆ. ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿ ಸದರಿ ಜಮೀನಿನಲ್ಲಿ ಹಂಚಿನಾಳ ಯಲ್ಲಮ್ಮ ಗಂಡ ಲೇಟ್ ಶಿವಪ್ಪ ಇವರು ಸಾಗುವಳಿ ಮಾಡುತ್ತೀರುವ ಪ್ರದೇಶದ ನಕ್ಷೆಯ ನಕಲು ಪ್ರತಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸದರಿ ದಿನಾಂಕದಂದು ನುಪ್ಪನಗೌಡ್ರು ಹೊನ್ನನಗೌಡ ತಂದೆ ದುರುಗಪ್ಪ, ಐ.ಹೆಚ್.ಶಿವಾನಂದಪ್ಪ ಇವರು ಹಾಜರಾಗಿ ಮಧ್ಯಾಂತರ ಲಿಖಿತವಾಗಿ ತಕರಾರು ಅರ್ಜಿಯನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

ಪುಟ-3ಕ್ಕೆ

ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ದಿನಾಂಕ:03.05.1965 ರಂದು ಇಟ್ಟಗಿ ಬಸಪ್ಪನ ಮಗ ಹನುಮಪ್ಪ ಮತ್ತು ಇಟ್ಟಗಿ ಬಸಪ್ಪನ ಹೆಂಡತಿ ಗಂಗಮ್ಮ ಇವರಿಂದ ಸ.ನಂ.47 ವಿಸ್ತೀರ್ಣ 10-95 ಎಕರೆ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದು, ಹಡಗಲಿ ನೋಂದಣಿ ಕಛೇರಿಯಲ್ಲಿ ನೋಂದಣಿ ಮಾಡಿಸಿಕೊಂಡಿರುತ್ತೇವೆ. ನೋಂದಣಿ ಸಂಖ್ಯೆ 1004/1965 ಇದ್ದು ಇದರಂತೆ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ. 1965 ರಲ್ಲಿ ಪಹಣಿ ಇಲ್ಲದೇ ಇರುವುದರಿಂದ ಈ ಭೂಮಿಯನ್ನು ಹಕ್ಕು ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ ಮತ್ತು ನಮ್ಮ ತಂದೆಯವರಾದ ದಿ:ದುರುಗಪ್ಪ ಮತ್ತು ನಮ್ಮ ತಾಯಿ ಹೊನ್ನವ್ವ ಹಂಚಿನಾಳ ಗ್ರಾಮದ ವಾಸಿ ಇಟ್ಟಿಗಿ ಶಿವಾನಂದಪ್ಪ ತಂದೆ ನೀಲಪ್ಪ ಇವರಿಗೆ ಸದರಿ ಭೂಮಿಯನ್ನು ಕ್ರಯಕ್ಕೆ ಕೊಟ್ಟಿರುತ್ತಾರೆ. ಇದರ ನೋಂದಣಿಯನ್ನು ಹಗರಿಬೊಮ್ಮನಹಳ್ಳಿ ನೋಂದಣಿ ಕಛೇರಿಯಲ್ಲಿ ದಿನಾಂಕ:16.03.1981 ರಂದು ಕ್ರಯಕ್ಕೆ ಕೊಟ್ಟು ನೋಂದಣಿ ಮಾಡಿಸಿದ್ದು ಅದರ ನೋಂದಣಿ ಸಂಖ್ಯೆ 5014/1981 ಇರುತ್ತದೆ. ಆದರೆ ಇವರ ಹಕ್ಕು ಬದಲಾವಣೆ ಆಗಿರುವುದಿಲ್ಲ. ಅಲ್ಲದೇ ಈ ಭೂಮಿಯನ್ನು ನಮ್ಮ ತಂದೆ ಮಾರಾಟ ಮಾಡಿದ ಮೇಲೆ ಹನುಮಪ್ಪನ ಮೊಮ್ಮಗಳಾದ ಗುಬ್ಬವ್ವ ಪೌತಿ ವಂಶವೃಕ್ಷದ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಗುಬ್ಬವ್ವ ನಮ್ಮ ತಂದೆ ಭೂಮಿ ಕ್ರಯಕ್ಕೆ ತೆಗೆದುಕೊಂಡು ನೋಂದಣಿ ಮಾಡುವಾಗ ನೋದಣಿ ಕಛೇರಿಯಲ್ಲಿ ಹಾಜರಾಗಿದ್ದು ಇವರು ಸಹಾ ಕ್ರಯಕ್ಕೆ ಕೊಟ್ಟಿರುವುದು ಒಪ್ಪಿ ಸದರಿ ಕ್ರಯ ಪತ್ರಕ್ಕೆ ಸಹಿ ಹಾಕಿರುತ್ತಾರೆ. ಆದ ಕಾರಣ, ಇವರು ಸಲ್ಲಿಸಿರುವ ಪೌತಿ ವಾರಸು ಪ್ರಕಾರ ಸಲ್ಲಿಸುವ ಅರ್ಜಿಯನ್ನು ವಜಾಮಾಡಿ ಕ್ರಯ ಪತ್ರ ಹೊಂದಿದ ನಮಗೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಿ ನಮ್ಮ ತಂದೆ ಮಾರಾಟ ಮಾಡಿದ ಸ.ನಂ.47ರ ಪೈಕಿ 4-00 ಎಕರೆ ಭೂಮಿಯನ್ನು ಇಟ್ಟಿಗಿ ಶಿವಾನಂದಪ್ಪ ತಂದೆ ನೀಲಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿಕೊಡಲು ಲಿಖಿತವಾಗಿ ತಕರಾರುದಾರರು(8,9) ಇವರು ಕೋರಿರುತ್ತಾರೆ. ಹಾಗೂ ನೋಂದಾಯಿತ ಕ್ರಯ ಪತ್ರ, ಇ.ಸಿ, ದೃಢೀಕೃತ ನಕಲು ಪ್ರತಿಯನ್ನು ಮತ್ತು ಕೈ ಬರಹ ಪಹಣಿ ಪತ್ರಿಕೆಗಳು, ಆಕಾರ್ ಬಂದ್, ನಕ್ಷೆಯ ನಕಲು ಪ್ರತಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ:11.08.2016 ರಂದು ಉಭಯರು ಹಾಜರಾಗಿರುತ್ತಾರೆ. ತಕರಾರುದಾರ(1) ಹೇಳುವಂತೆ; ಸದರಿ ಜಮೀನು ನನ್ನ ಮುತ್ತಜ್ಜನ ಜಮೀನಾಗಿರುತ್ತದೆ. ಎಂದು ಮೌಖಿಕವಾಗಿ ಹೇಳಿಕೆ ನೀಡಿರುತ್ತಾರೆ. ಹಾಗೂ ಸದರಿ ಜಮೀನಿನಲ್ಲಿ ಸುಮಾರು 46 ವರ್ಷಗಳಿಂದ ನಾವು ಸಾಗುವಳಿ ಮಾಡುತ್ತಾ ಬಂದಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಮಧ್ಯಾಂತರ ತಕರಾರುದಾರರು(9) ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದಲ್ಲಿ ಶಿವಾನಂದಪ್ಪ ಆದ ನಾನು ಸದರಿ ಜಮೀನಿನಲ್ಲಿ ಪೈಕಿ ವಿಸ್ತೀರ್ಣ 4-00 ಎಕರೆ ಜಮೀನು ನಾನು ಸುಮಾರು ಇಸ್ವಿ 1981 ರಿಂದ ಸಾಗುವಳಿ ಮಾಡುತ್ತಾ ಬಂದಿರುತ್ತೇನೆ. ತಕರಾರುದಾರ(8) ಅಂದರೆ ಹೊನ್ನಗೌಡ ಇವರು ಹೇಳುವಂತೆ; 1965 ರಿಂದ 1981 ರವರೆಗೆ ಸದರಿ ಜಮೀನು ನಾವು ಸಾಗುವಳಿ, ಅನುಭವದಲ್ಲಿ ಇರುತ್ತೇವೆ. ಹಾಗೂ 1981 ರಿಂದ ವಿಸ್ತೀರ್ಣ 6-95 ಎಕರೆ ಜಮೀನು ಸಾಗುವಳಿ ಮಾಡುತ್ತಾ ಬಂದಿರುತ್ತೇವೆ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಸದರಿ ಜಮೀನಿನ ಮೇಲೆ ಈಗಾಗಲೇ ದಿನಾಂಕ:03.05.1965 ರಂದು ಕ್ರಯಕ್ಕೆ ಹನುಮಪ್ಪ ಇವರಿಂದ ನುಪ್ಪನಗೌಡ ಹೊನ್ನಗೌಡ ಮೈ.ಗಾ. ತಾಯಿ ಹೊನ್ನವ್ವ ಇವರ ಹೆಸರಿಗೆ ನೋಂದಾಯಿತ ಕ್ರಯ ಆಗಿರುವುದು ಕಂಡುಬಂದಿರುತ್ತದೆ. ಮುಂದುವರೆದು ಸದರಿ ಜಮೀನು ದಿನಾಂಕ:16.03.1981 ರಲ್ಲಿ ಮತ್ತೆ ನುಪ್ಪನಗೌಡ ಹೊನ್ನಗೌಡ ಇವರಿಂದ ಇಟಗಿ ಶಿವಾನಂದಪ್ಪ ಇವರಿಗೆ ಪೈಕಿ ವಿಸ್ತೀರ್ಣ 4-00 ಎಕರೆ ಜಮೀನು ನೋಂದಾಯಿತ ಕ್ರಯಕ್ಕೆ ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ವ್ಯಾಜ್ಯದ ಜಮೀನಿನ ಮೇಲೆ ಎರಡು ಬಾರಿ ನೋಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಮಾರಾಟ ವಾಗಿರುವುದರಿಂದ ಸದರಿ ವಿಷಯವು ಈ ನ್ಯಾಯಾಲಯದ ವ್ಯಾಪ್ತಿಗೆ ಮೀರಿರುವುದರಿಂದ ಈ ನ್ಯಾಯಾಲಯಕ್ಕಿಂತ ಮೇಲ್ಪಟ್ಟ ನ್ಯಾಯಾಲಯದಲ್ಲಿ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಈ ಕೆಳಕಂಡಂತೆ ಆದೇಶ;

ಪುಟ-4ಕ್ಕೆ